Depositions

ಅ.ದಾ. ಸಂಖ್ಯೆ:- 9/2015
ಡಿಡಬ್ಲ್ಯೂ:-1

ದಿನಾಂಕ: 25.03.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಶ್ರೀ ಸಿ ಪಿ ವಕೀಲರಿಂದ.

ನಾನು 10ನೇ ತರಗತಿ ತನಕ ಓದಿರುತ್ತೇನೆ.ನಾನು ವ್ಯವಸಾಯ ಮಾಡುತ್ತೇನೆ.ಹೊಳೆಕೊಪ್ಪ ಗ್ರಾಮದಲ್ಲಿ ನನ್ನ ತಾಯಿ ಹೆಸರಿನಲ್ಲಿ ಆರ್ ಟಿಸಿ ಇದ್ದು ನನ್ನ ಹೆಸರಿನಲ್ಲಿ ಇರುವುದಿಲ್ಲ. ನಮ್ಮ ತಂದೆ ಹಿರಿಯಣ್ಣ ಗೌಡರಿಗೆ 2 ಜನ ಗಂಡು 6 ಜನ ಹೆಣ್ಣು ಮಕ್ಕಳು . ಸ ನಂ. 111, 112, 113, 117 ಜಮೀನುಗಳು ನಮ್ಮ ತಂದಗೆ ಇದ್ದವು. ಸದರಿ ಜಮೀನುಗಳು ನಮ್ಮ ತಂದೆಗ ಭೂನ್ಯಾಯ ಮಂಡಳಿಯಿಂದ ಆಗಿದ್ದು ಸ ನಂ 117 ದರ್ಕಾಸುದು ಮಂಜೂರಾತಿ ಮೂಲಕ ಆಗಿರುತ್ತದೆ. ನಮ್ಮ ತಂದೆ ಈಗ ಬದುಕಿರುವುದಿಲ್ಲ.ನಮ್ಮ ತಂದೆ ಬದುಕಿರುವಾಗ ಯಾವುದೇ ಹಿಸ್ಸಾ ಪತ್ರ ಆಗಿರುವುದಿಲ್ಲ.ನಮ್ಮ ತಂದೆಯ ಮರಣದ ನಂತರ ನಾವೆಲ್ಲರೂ ಹಿಸ್ಸೆ ಮಾಡಿಕೊಳ್ಳದೆ ಒಟ್ಟಾಗಿ ವಾಸ ಇರುತ್ತೇವೆ. ಸ ನಂ 117 ರಲ್ಲಿ 2 ಎಕರೆ ನಮ್ಮ ತಂದೆ ಹೆಸರಿನಲ್ಲಿ ಸ್ವತ್ತು ಮಂಜೂರು ಆಗಿರುತ್ತದೆ. ಸದರಿ ಸ ನಂ ಪೂರ್ವಕ್ಕೆ - ಸ ನಂ 115 ಮತ್ತು ಸ ನಂ 116 ಸ್ವತ್ತು. ಪಶ್ಚಿಮಕ್ಕೆ-ಸ ನಂ 111 , ಉತ್ತರ- ಕ್ಕೆಸ ನಂ 117, ದಕ್ಷಿಣ್ಣಕೆ- ಸ ನಂ 117 ಬರುತ್ತದೆ. ಮೇಲೆ ಹೇಳಿದ ಸ ನಂಗಳನ್ನು ಹೊರತು ಪಡಿಸಿ ಸ ನಂ 117ರಲ್ಲಿ ಸರ್ಕಾರಿ ಜಮೀನಲ್ಲಿ ಅಕ್ರಮ ಸಾಗುವಳಿಯನ್ನು 3 ರಿಂದ 4 ಎಕರೆಗೆ ಮಾಡುತ್ತೇವೆ. ಅರ್ಜಿ ಸಲ್ಲಿಸಿದ್ದು ಮಂಜೂರಾತಿ ಆಗಿರುವುದಿಲ್ಲ.ಮೇಲೆ ಹೇಳಿದ ಸ್ವತ್ತುಗಳನನ್ನು ಹೊರತು ಪಡಿಸಿ ಬೇರೇ ಸ್ವತ್ತುಗಳು ನಮ್ಮ ಸ್ವಾಧೀನದಲ್ಲಿ ಇರುವುದಿಲ್ಲ.

ಸ ನಂ 115ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ.ಸ ನಂ 115 ಖುಷಿ ಭೂಮಿ ಆಗಿರುತ್ತದೆ. ಸ.ನಂ.115 ಮೂಲತಃ ಸಿದ್ದಪ್ಪ ಗೌಡರ ಜಮೀನು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಸ ನಂ ನಲ್ಲಿ ನಮಗೆ ಯಾವುದೆ ಸ್ವತ್ತು ಹಾಗೂ ಸ್ವಾಧೀನ ಇರುವುದಿಲ್ಲ. ಸ ನಂ 115ರ ಭೂಮಿಯನ್ನು ನಾನು ನೋಡಿರುತ್ತೇನೆ.ಸ ನಂ 115ರ ಪೂರ್ವಕ್ಕೆ ಟ್ರೆಂಚ್ ನಂತರ ಸ ನಂ 117 ಬರುತ್ತದೆ ಎಂದರೆ ಸಾಕ್ಷಿಯು ಸರ್ಕಾರಿ ಸ್ವತ್ತು ಬರುತ್ತದೆ ಎಂದು ನುಡಿದಿರುತ್ತಾರೆ. ಪಶ್ಚಿಮಕ್ಕೆ- ಟ್ರೆಂಚ್ ನಂತರ ಸರ್ಕಾರಿ ಸ್ವತ್ತು ಹಾಗೂ ಕೆರೆ ಅಡಿಕೆ ತೋಟ ಬರುತ್ತದೆ ಎಂದರೆ ಸಾಕ್ಷಿಯು ಸ ನಂ 117ರ ಸರ್ಕಾರಿ ಸ್ವತು ಬರುತ್ತದೆ ಎಂದು ನುಡಿದಿರುತ್ತಾರೆ. ಉತ್ತರ ಮತ್ತು ದಕ್ಷಿಣಕ್ಕೆ ಟ್ರೆಂಚ್ ನಂತರ ಸರ್ಕಾರಿ ಸ್ವತ್ತು ಹಾಗೂ ಕೆರೆ ಅಡಿಕೆ ತೋಟ ಬರುತ್ತದೆ ಎಂದರೆ ಸಾಕ್ಷಿಯು ಸ ನಂ 117ರ ಸರ್ಕಾರಿ ಸ್ವತು ಬರುತ್ತದೆ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತನ್ನು ಸಿದ್ದಪ್ಪಗೌಡರಿಂದ ವಾದಿಯುದಿ.16-11-1982 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಈ ದಾವೆಯನನ್ನು ಸಲ್ಲಿಸುವ ಪೂರ್ವದಲ್ಲಿ ಹಾಗೂ ನಂತರದಲ್ಲಿ ದಾಲಾತಿಯನ್ನು ನಾನು ನೋಡಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಿ ಪಿ ಅವರಿಂದ ಸಮಯ ಕೋರಲಾಗಿದೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉತ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಎರಡನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ತೀರ್ಥಹಳ್ಳಿ

Depositions